# ಕರ್ನಾಟಕ ಸರ್ಕಾರ

ಸಂಖ್ಯೆ. ಸಿಆಸುಇ 63 ಇಆಇ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 22-6-2018

## ಸುತ್ತೋಲೆ

ರಾಜ್ಯ ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಅನುಮೋದಿಸಿ, ಸರ್ಕಾರವು **ಆದೇಶ ಸಂಖ್ಯೆ:ಆಇ 06 ಎಸ್.ಆರ್.ಪಿ. 2018 ಬೆಂಗಳೂರು, ದಿನಾಂಕ:1ನೇ ಮಾರ್ಚ್ 2018** ರಂದು ಹೊರಡಿಸಿದೆ. ಅದರಂತೆ ಪರಿಷ್ಕೃತ ವೇತನ ಶ್ರೇಣಿ ಹಾಗೂ ಪರಿಷ್ಕೃತ ಮೂಲ ವೇತನವನ್ನು ದಿನಾಂಕ 1ನೇ ಜುಲೈ 2017 ರಿಂದ ಜಾರಿಗೆ ಬರುತ್ತದೆ. ವೇತನ ಪರಿಷ್ಕರಣೆಯ ಆರ್ಥಿಕ ಸೌಲಭ್ಯವು ದಿನಾಂಕ 1ನೇ ಏಪ್ರಿಲ್ 2018 ರಿಂದ ಲಭ್ಯವಾಗುತ್ತದೆ. ಪರಿಷ್ಕೃತ ವೇತನವು, ಪ್ರಸ್ತುತ ಮೂಲ ವೇತನ ಮತ್ತು ಮೂಲ ವೇತನದ ಶೇ 30 ಹಾಗೂ ತುಟ್ಟಿಭತ್ಯದ ಮೊತ್ತವಾಗಿರುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರು, ಪ್ರೌಢಶಾಲಾ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಪಡೆಯುತ್ತಿರುವ ವಿಶೇಷ ಭತ್ಯೆಯನ್ನು ಹಳೆಯ ವೇತನಕ್ಕೆ ಸೇರಿಸಿ ಪರಿಷ್ಕೃತ ವೇತನವನ್ನು ನಿಗಧಿಪಡಿಸಬೇಕಾಗಿದೆ.

**ಸರ್ಕಾರಿ ಆದೇಶಸಂಖ್ಯೆ: ಆಇ 06 ಎಸ್.ಆರ್.ಪಿ 2018, ಬೆಂಗಳೂರು ದಿನಾಂಕ: 19 ಏಪ್ರಿಲ್ 2018.** ರಲ್ಲಿ ಪ್ರಸ್ತುತ ವೇತನ ಶ್ರೇಣಿಗಳಿಗೆ ಪರಿಷ್ಕೃತ ವೇತನ ಶ್ರೇಣಿಗಳನ್ನು ನೀಡಲಾಗಿದೆ. ಮನೆ ಬಾಡಿಗೆ ಭತ್ಯೆ (HRA) ಮತ್ತು ನಗರ ಭತ್ಯೆ(CCA) ಪರಿಷ್ಕರಿಸಲಾಗಿದೆ. ಸದರಿ ಆದೇಶದಲ್ಲಿ ವೇತನ ಪರಿಷ್ಕರಿಸುವ ವಿದಾನಗಳ ಕುರಿತು ಉದಾಹರಣೆಗಳನ್ನು ಸಹ ನೀಡಲಾಗಿದೆ. ಅಧಿಸೂಚನೆ ಸಂಖ್ಯೆ. ಆಇ **06 ಎಸ್.ಆರ್.ಪಿ 2018**. ದಿನಾಂಕ 19-04-2018 [ಕರ್ನಾಟಕ ನಾಗರೀಕ ಸೇವಾ (ಪರಿಷ್ಕೃತ ವೇತನ) ನಿಯಮಗಳು 2018] ರಲ್ಲಿ ವಿವರವಾಗಿ ವೇತನ ಪರಿಷ್ಕರಣೆ ಕುರಿತು ನಿಯಮಗಳನ್ನು ನೀಡಲಾಗಿದೆ. ಸದರಿ ಅಧಿಸೂಚನೆಯ ಅನುಸೂಚಿ 4 ರ ಪ್ರಕಾರ ಪರಿಷ್ಕೃತ ವೇತನವನ್ನು ನಿಗಧಿಪಡಿಸಬೇಕಾಗಿದೆ. ದಿನಾಂಕ 19ನೇ ಏಪ್ರಿಲ್ 2018 ರ ಸರ್ಕಾರಿ ಆದೇಶದ ಅನುಬಂಧ II ರ ನಮೂನೆ ಪ್ರಕಾರ ನಿಯಮಾನುಸಾರ ಪರಿಷ್ಕೃತ ವೇತನ ನಿಗದಿ ಪಡಿಸಲು ಕಛೇರಿ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ. ಮಹಾಲೇಖಪಾಲರು ವೇತನ ನಿಗಧಿ ಪಡಿಸುವ ನೌಕರರಿಗೆ ಸಂಬಂಧಿಸಿದಂತೆ, ಮಹಾಲೇಖಪಾಲರು ಸಂಬಂಧಿಸಿದ ನೌಕರರಿಗೆ ಪರಿಷ್ಕೃತ ವೇತನವನ್ನು ನಿಗದಿಪಡಿಸಬೇಕಾಗಿದೆ.

ಇ-ಆಡಳಿತ ಕೇಂದ್ರದಿಂದ ಕೋರಿದ ಸ್ಪಷ್ಟೀಕರಣಗಳಿಗೆ ಆರ್ಥಿಕ ಇಲಾಖೆಯು ತಮ್ಮ ಪತ್ರ ಸಂಖ್ಯೆ FD 229 ser-2/2018 ದಿನಾಂಕ 18-05-2018 ಮತ್ತು FD 350 Ser-2/2018 ದಿನಾಂಕ 13-06-2018ರ ಮೂಲಕ ಹಲವು ಸ್ಪಷ್ಟೀಕರಣಗಳನ್ನು ನೀಡಿರುತ್ತದೆ. (ಸದರಿ ಪತ್ರಗಳ ಪ್ರತಿಗಳು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಲಭ್ಯವಿರುತ್ತದೆ). ಇದರಂತೆ ಅಧಿಸೂಚನೆಯ ಅನುಸೂಚಿ 4 ರಲ್ಲಿ ಪ್ರಸ್ತುತ ಮೂಲ ವೇತನ ಹೊಂದಾಣಿಕೆ ಯಾಗದಿದ್ದರೆ ಅಂತಹ ಪ್ರಕರಣಗಳಿಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವುದು. ಪ್ರಾಂಶುಪಾಲರ ವಿಶೇಷ ಭತ್ಯೆಹಿಂದಿನಂತೆ ಮುಂದುವರೆಸುವುದು. ಇತರೆ ಭತ್ಯ ಗಳನ್ನು ಮುಂದಿನ ಆದೇಶದವರೆಗೆ ಹಿಂದಿನಂತೆ ಮುಂದುವರೆಸುವುದು. KGID ಮತ್ತು EGIS ಮುಂದಿನ ಆದೇಶದವರೆಗೆ ಹಿಂದಿನಂತೆ ಮುಂದುವರೆಸುವುದು.

ಈ ಹಿನ್ನಲೆಯಲ್ಲಿ ಹೆಚ್.ಆರ್.ಎಂ.ಎಸ್. ನಲ್ಲಿ ಪರಿಷ್ಕೃತ ವೇತನ ಶ್ರೇಣಿ ಹಾಗೂ ಮೂಲ ವೇತನ ನಿಗಧಿಪಡಿಸಿ ವೇತನ ನಗಧೀಕರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಪ್ರಕ್ರಿಯೆಯನ್ನು ಎರಡು ಹಂತದಲ್ಲಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪ್ರಥಮ ಹಂತದಲ್ಲಿ ಪ್ರಸ್ತುತ ವೇತನ ಮತ್ತು ಮೂಲ ವೇತನವನ್ನು ದಿನಾಂಕ 1-07-2017 ಹಾಗೂ 1-04-2018ಕ್ಕೆ ಅನ್ವಯಿಸುವಂತೆ ಪರಿಷ್ಕೃತ ವೇತನ ಶ್ರೇಣಿ ಮತ್ತು ಪರಿಷ್ಕೃತ ಮೂಲ ವೇತನವನ್ನು ನಿಗಧಿಪಡಿಸುವುದು. ಎರಡನೇ ಹಂತದಲ್ಲಿ ಜೂನ್ 2018ರ ವೇತನವನ್ನು ನಗಧೀಕರಿಸುವುದು. ವೇತನ ನಗಧೀಕರಣ ಸೌಲಭ್ಯವನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಎರಡು ಮೂರು ದಿನಗಳಲ್ಲಿ ನೀಡಲಾಗುವುದು. ಏಪ್ರಿಲ್ ಹಾಗೂ ಮೇ ತಿಂಗಳ ವೇತನ ಬಾಕಿಯನ್ನೂ ಸಹ ನಗಧೀಕರಿಸಲು ಅವಕಾಶ ಕಲ್ಪಿಸಿ ಕೊಡಲಾಗುವುದು.

ಎಲ್ಲಾ ಬಟವಾಡೆ ಅಧಿಕಾರಿಗಳು ಪ್ರತಿ ಸರ್ಕಾರಿ ನೌಕರರ ಪರಿಷ್ಕೃತ ವೇತನ ಶ್ರೇಣಿ ಹಾಗೂ ಪರಿಷ್ಕೃತ ಮೂಲ ವೇತನವನ್ನು 01-07-2017 ಮತ್ತು 01-04-2018ಕ್ಕೆ ಅನ್ವಯಿಸುವಂತೆ ನಿಗಧಿಪಡಿಸಿ ಅನುಮೋದಿಸುವುದು. ಮಹಾಲೇಖಪಾಲರು ವೇತನ ನಿಗಧಿಪಡಿಸುವ ನೌಕರರಿಗೆ ಸಂಬಂಧಿಸಿದಂತೆ ಮಹಾಲೇಖಪಾಲರು ನಿಗಧಿಪಡಿಸಿದ ಪ್ರಕಾರ ಸಂಬಂಧಿತ ನೌಕರರಿಗೆ ಪರಿಷ್ಕೃತ ವೇತನ ನಿಗಧಿಗೊಳಿಸಿ ಅನುಮೋದಿಸುವುದು.

ಇಲಾಖೆಯ ಹೆಚ್.ಆರ್.ಎಂ.ಎಸ್. ನೋಡಲ್ ಅಧಿಕಾರಿಗಳು ಹಾಗೂ ಬಟವಾಡೆ ಅಧಿಕಾರಿಗಳು ಈ ಮುಂದಿನ ಅಂಶಗಳನ್ನು ಪರಿಗಣಿಸತಕ್ಕದ್ದು.

1. ಯಾವುದೇ ನೌಕರರ ಪರಿಷ್ಕೃತ ವೇತನವು ಸರಿಯಾಗಿ ಬರದಿದ್ದರೆ, ಅಂತಹ ನೌಕರರ ಮಾಹಿತಿಯನ್ನು ನೋಡಲ್ ಅಧಿಕಾರಿಗಳು ಸಂಬಂಧಿತ ಬಟಾವಾಡೆ ಅಧಿಕಾರಿಗಳಿಗೆ ಪರಿಶೀಲಿಸಲು ತಿಳಿಸಬೇಕು.
2. ನೌಕರರ ಹಿಂದಿನ ವೇತನದ ಮೂಲ ವೇತನ ಹಾಗೂ ವೇತನ ಶ್ರೇಣಿ ತಪ್ಪಾಗಿ ಇದ್ದರೆ, ಅಂತಹ ಪ್ರಕರಣಗಳನ್ನು ಸಂಬಂಧಿತ ಬಟವಾಡೆ ಅಧಿಕಾರಿಗಳು ತಮ್ಮ ಇಲಾಖೆಯ ನೋಡಲ್ ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಿಕೊಂಡು, ತದನಂತರ ವೇತನ ಪರಿಷ್ಕರಣೆ ಮಾಡತಕ್ಕದ್ದು.
3. ನೌಕರರ ಹಿಂದಿನ ವೇತನ ಮಾಹಿತಿ ಸರಿಯಾಗಿಲ್ಲವೆಂದು ಕಂಡು ಬಂದಲ್ಲಿ ಅಂತಹ ಪ್ರಕರಣಗಳನ್ನು ಬಟಾವಾಡೆ ಅಧಿಕಾರಿಗಳು ಹಾಗೂ ಅಧಿಕಾರಿಗಳು ತಮ್ಮ ಹಂತದಲ್ಲಿಯೇ ತಂತ್ರಾಂಶದಲ್ಲಿ ಸರಿಪಡಿಸಿಕೊಂಡು ಒಂದು ವೇಳೆ ತಮ್ಮ ಹಂತದಲ್ಲಿ ಪರಿಹರಿಸಲಾಗದ ಪಕ್ಷದಲ್ಲಿ ಹೆಚ್.ಆರ್.ಎಂ.ಎಸ್ ನಲ್ಲಿ ಆನ್ ಲೈನ್ ಮುಖಾಂತರ ದೂರನ್ನು ದಾಖಲಿಸುವುದು.
4. ಯಾವುದೇ ನೌಕರರು/ಬಟಾವಾಡೆ ಅಧಿಕಾರಿಯು ಹೆಚ್.ಆರ್.ಎಂ.ಎಸ್. ಶಾಖೆಯನ್ನು ನೇರವಾಗಿ ಸಂಪರ್ಕಿಸಬಾರದು, ಬದಲಿಗೆ ತಮ್ಮ ಯಾವುದೇ ಸಮಸ್ಯೆಗಳಿಗೆ ಇಲಾಖೆಯ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು. ನೌಕರರು ನೇರವಾಗಿ ಹೆಚ್.ಆರ್.ಎಂ.ಎಸ್. ಕೇಂದ್ರವನ್ನು ಸಂಪರ್ಕಿಸಿದಲ್ಲಿ ಅಂತಹ ಪ್ರಕರಣಗಳನ್ನು ಪರಿಗಣಿಸಲಾಗುವುದಿಲ್ಲ.
5. ನೋಡಲ್ ಅಧಿಕಾರಿಗಳು ಎಲ್ಲಾ ಬಟಾವಾಡೆ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು ತಾಂತ್ರಿಕ ಸಮಸ್ಯೆಗಳಿಗೆ ಹಾಗೂ ನೌಕರರ ಎಲ್ಲಾ ಮಾಹಿತಿಯು ಸರಿಯಾಗಿದ್ದರೂ ಪರಿಷ್ಕೃತ ವೇತನವು ಸರಿಯಾಗಿ ಬಾರದಿದ್ದರೆ, ಅಂತಹ ಪ್ರಕಣಗಳನ್ನು ಆನ್ ಲೈನ್ ಮುಖಾಂತರ ಹೆಚ್.ಆರ್.ಎಂ.ಎಸ್. ಶಾಖೆಗೆ ದೂರನ್ನು ದಾಖಲಿಸಿ ಸರಿಪಡಿಸಿಕೊಳ್ಳುವುದು.

**ಈ ಕೆಳಕಂಡ ಪ್ರಕರಣಗಳಲ್ಲಿ ಬಟವಾಡೆ ಅಧಿಕಾರಿಗಳು ನೋಡಲ್ ಅಧಿಕಾರಿಯನ್ನು ಸಂಪರ್ಕಿಸ ಬೇಕಾಗಿ ತಿಳಿಸಿದೆ.**

1. ಹೆಚ್.ಆರ್.ಎಂ.ಎಸ್. ನಲ್ಲಿ ನೌಕರರ ಮಾಹಿತಿಯನ್ನು ಅಳವಡಿಸುವಾಗ ಪ್ರಸ್ತುತ ವೇತನ ಶ್ರೇಣಿಯನ್ನು ತಪ್ಪಾಗಿ ನಮೂದಾಗಿರುವುದು ಕಂಡು ಬಂದಲ್ಲಿ

2. ಕಾಲಮಿತಿ ಬಡ್ತಿ ಪಡೆದಾಗ ವೇತನ ಶ್ರೇಣಿಯನ್ನು ಬದಲಾಯಿಸದೇ ಇದ್ದಾಗ.(ವೇತನ ಶ್ರೇಣಿ ಬದಲಾಯಿಸದೇ ಬಡ್ತಿ ವೇತನ ಪಡೆವಾಗ)
3. ಮುಂಬಡ್ತಿ ಸಮಯದಲ್ಲಿ ವೇತನ ಶ್ರೇಣಿಯನ್ನು ತಪ್ಪಾಗಿ ನಮೂದಿಸಿರುವುದನ್ನು ಕಂಡು ಬಂದಲ್ಲಿ.
4. ಮರು ನೇಮಕಾತಿ ಸಮಯದಲ್ಲಿ ವೇತನ ಶ್ರೇಣಿಯನ್ನು ತಪ್ಪಾಗಿ ನಮೂದಿಸಿರುವುದನ್ನು ಕಂಡು ಬಂದಲ್ಲಿ.
5. ತಂತ್ರಾಂಶದಲ್ಲಿ ನೌಕರರ ವಾರ್ಷಿಕ ಬಡ್ತಿಯು ಸ್ವಯಂ ಚಾಲಿತವಾಗಿ ನೀಡಲಾಗುತ್ತದೆ. ಒಂದು ವೇಳೆ ಬಟವಾಡೆ ಅಧಿಕಾರಿಗಳು ಯಾವುದೇ ನೌಕರರ ಏಪ್ರಿಲ್ 2018 ರವರೆಗಿನ ವಾರ್ಷಿಕ ಬಡ್ತಿಯನ್ನು ತಡೆಹಿಡಿದಿದ್ದರೆ, ಸದರಿ ನೌಕರರಿಗೆ ಅರ್ಹತೆಯಿದ್ದಲ್ಲಿ ವಾರ್ಷಿಕ ಬಡ್ತಿಯನ್ನು ನಿಯಮಾನುಸಾರ ಬಿಡುಗಡೆಗೊಳಿಸಿ ತದನಂತರ ಪರಿಷ್ಕೃತ ವೇತನವನ್ನು ಅಳವಡಿಸುವುದು. ಮೇ 2018ರ ಮಾಹೆಯ ವಾರ್ಷಿಕ ಬಡ್ತಿ ತಡೆಹಿಡಿದಿದ್ದಲ್ಲಿ, ವೇತನ ನಗಧೀಕರಣ ಮಾಡುವ ಮುನ್ನ ನಿಯಮಾನುಸಾರ ಅರ್ಹತೆಯಿದ್ದಲ್ಲಿ ವಾರ್ಷಿಕ ಬಡ್ತಿ ಬಿಡುಗಡೆಗೊಳಿಸಿ ನಂತರ ಜೂನ್ 2018ರ ಪರಿಷ್ಕೃತ ಮೂಲ ವೇತನದಡಿ ವೇತನ ನಗಧೀಕರಿಸುವುದು.
6. ಕಾಲಮಿತಿ ಬಡ್ತಿ/ಸ್ಥಗಿತ ಬಡ್ತಿಯನ್ನು ಹೆಚ್.ಆರ್.ಎಂ.ಎಸ್. ಅಳವಡಿಸದೇ ಇದ್ದರೆ ಈ ವಿವರಗಳನ್ನು ಅಳವಡಿಸಿದ ನಂತರ ಪರಿಷ್ಕೃತ ವೇತನ ಪಡೆಯುವುದು.
7. ಅಮಾನತು ಪ್ರಕರಣಗಳ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಅಳವಡಿಸಿ ಪರಿಷ್ಕೃತ ವೇತನ ಪಡೆಯುವುದು.

ಈ ಮೇಲಿನ ವ್ಯತ್ಯಾಸಗಳು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ನೇರವಾಗಿ ಕಂಡುಹಿಡಿಯಲು ಸಾಧ್ಯವಿಲ್ಲದ ಕಾರಣ ನ್ಯೂನತೆಗಳನ್ನು ಬಟವಾಡೆ ಅಧಿಕಾರಿಗಳು ಗಮನಿಸಿ ಸರಿಪಡಿಸಬೇಕು. ಇಲ್ಲವಾದಲ್ಲಿ ವೇತನ ಪರಿಷ್ಕರಣೆ ಸರಿಯಾಗಿ ಆಗುವುದಿಲ್ಲ. ಈ ವ್ಯತ್ಯಾಸಗಳಿಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಮತ್ತು ಆಯಾ ಇಲಾಖೆಯ ಹೆಚ್.ಆರ್.ಎಂ.ಎಸ್. ನೋಡಲ್ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

ಅಧಿಸೂಚನೆಯ ಅನುಸೂಚಿ 4 ರಲ್ಲಿ ಪ್ರಸ್ತುತ ಮೂಲ ವೇತನ ಹೊಂದಾಣಿಕೆಯಾಗದಿದ್ದರೆ ಅಂತಹ ಪ್ರಕರಣಗಳಿಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವುದು.

ಒಂದು ವೇಳೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾರಣಾಂತರಗಳಿಂದ ಮೂಲ ವೇತನ ಪರಿಷ್ಕರಿಸಲು ಸಾಧ್ಯವಾಗದಿದ್ದಲ್ಲಿ, ಜೂನ್ ಮಾಹೆಯ ವೇತನವನ್ನು ಪ್ರಸ್ತುತ ವೇತನ ಶ್ರೇಣಿಯಲ್ಲೇ ಮುಂದುವರೆಸಿ ವೇತನ ಸೆಳೆದು ನಂತರದ ದಿನಗಳಲ್ಲಿ ಪರಿಷ್ಕೃತ ವೇತನವನ್ನು ಪಡೆಯಬಹುದು. ಹೆಚ್.ಆರ್.ಎಂ.ಎಸ್. ಇದಕ್ಕೆ ಅವಕಾಶ ಕಲ್ಪಿಸಿಕೊಡಲಾಗುವುದು.

ಎಲ್ಲಾ ಇಲಾಖೆಯ ಇಲಾಖಾ ಮುಖ್ಯಸ್ಥರು, ಇಲಾಖೆಯ ಹೆಚ್.ಆರ್.ಎಂ.ಎಸ್. ನೋಡಲ್ ಅಧಿಕಾರಿಗಳು ಮತ್ತು ಬಟವಾಡೆ ಅಧಿಕಾರಿಗಳು ಈ ಅಂಶಗಳನ್ನು ಗಮನಿಸಲು ತಿಳಿಸಿದೆ.

24/5/18

(ರಾಜೀವ್ ಚಾವ್ಲಾ)
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

ಸಂಖ್ಯೆ: ಕಾಶಿಇ/ಮಾತಂವಿ/18/ಹೆಚ್.ಆರ್.ಎಂ.ಎಸ್/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ದಿನಾಂಕ: 23/06/2018

**2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗದಿಪಡಿಸಿ ಹೆಚ್.ಆರ್.ಎಂ.ಎಸ್.ನಲ್ಲಿ ಅಳವಡಿಸುವ ಸಂಬಂದದಲ್ಲಿ ಹೊರಡಿಸಿರುವ ಸರ್ಕಾರದ ಸುತ್ತೋಲೆಯನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.**

*ಇವರಿಗೆ*

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಗುಲ್ಬರ್ಗ
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬಟವಾಡೆ ಅಧಿಕಾರಿಗಳು
3) ಮ್ಯಾನೇಜರ್, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
4) ಮ್ಯಾನೇಜರ್, ಸೇವಾ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ
6) ಕಛೇರಿ ಪ್ರತಿ.

ಕಾಲೇಜು ಶಿಕ್ಷಣ ಆಯುಕ್ತರು.